# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 20.12.2016 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿ ನಡೆದ ಸಿಂಡಿಕೇಟಿನ 2016ನೇ ಸಾಲಿನ ಎಂಟನೆಯ ಸಾಮಾನ್ಯ ಸಭೆಯ ನಡಾವಳಿಗಳು.**

ಉಪಸ್ಥಿತ ಸದಸ್ಯರು

ಅನುಪಸ್ಥಿತ ಸದಸ್ಯರು:

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

## ಪ್ರಾರಂಭಿಕ

1. ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಸಿಂಡಿಕೇಟಿಗೆ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿದ್ದ ಡಾ. ಫರೀಟಾ ಎನ್. ಎಫ್. ವೇಗಸ್, ಪ್ರಾಂಶುಪಾಲರು, ಸೈಂಟ್ ಅಲೋಶಿಯಸ್ ಇನ್‌ಸ್ಟಿಟ್ಯೂಟ್ ಆಫ್ ಎಜ್ಯುಕೇಶನ್, ಮಂಗಳೂರು – 575003,ಇವರ ಸಿಂಡಿಕೇಟ್ ಸದಸ್ಯತ್ವದ ಅವಧಿಯು ಕೊನೆಗೊಂಡಿರುವುದರಿಂದ ಇವರನ್ನು ಸಿಂಡಿಕೇಟ್ ಸದಸ್ಯತ್ವದಿಂದ ಬಿಡುಗಡೆಗೊಳಿಸಲಾದ ವಿಷಯವನ್ನು ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿದರು. ಸದರಿ ಪ್ರಾಂಶುಪಾಲರು ತಮ್ಮ ಸದಸ್ಯತ್ವದ ಅವಧಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ ದಾಖಲಿಸಲಾಯಿತು.

## ಪ್ರಸ್ತಾವನೆ

1. ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿ ಈ ಸಾಲಿನ ಸಿಂಡಿಕೇಟ್ ಸಭೆಯನ್ನು ಏರ್ಪಡಿಸಿರುವ ಉದ್ದೇಶವನ್ನು ವಿವರಿಸುತ್ತಾ ಸಿಂಡಿಕೇಟ್ ಸದಸ್ಯರುಗಳಿಗೆ, ಈ ಕೇಂದ್ರದಲ್ಲಿ ಆಗುತ್ತಿರುವ ಮೂಲಭೂತ ಸೌಕರ್ಯಗಳ ಹಾಗೂ ಶೈಕ್ಷಣಿಕ ಚಟುವಟಿಕೆಗಳಅಭಿವೃದ್ಧಿ ಹಾಗೂ ಈ ಕೇಂದ್ರವು ಕೊಡಗಿನ ಶಿಕ್ಷಣ ರಂಗದಲ್ಲಿ ಉಂಟು ಮಾಡಿರುವ ಪ್ರಭಾವ ಮತ್ತು ಬದಲಾವಣೆಗಳನ್ನು ತಿಳಿಸಿದರು. ಅಲ್ಲದೆ ಈ ಕೇಂದ್ರವನ್ನು ಒಂದು ಅಂತರಾಷ್ಟ್ರೀಯ ಮಟ್ಟದ ಸಂಶೋಧನಾ ಕೇಂದ್ರವನ್ನಾಗಿ ಮಾರ್ಪಡಿಸಲು ಕೈಗೊಳ್ಳುತ್ತಿರುವ ಕ್ರಮಗಳ ಕುರಿತು ತಿಳಿಸಿದರು.

   ಮಾನ್ಯ ಕುಲಪತಿಯವರು,ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರಕ್ಕೆ ಕರ್ನಾಟಕ ಸರ್ಕಾರದಿಂದ ಪ್ರತ್ಯೇಕ ಅನುದಾನ ಇಲ್ಲದಿರುವ ವಿಷಯವನ್ನು ಸದಸ್ಯರಿಗೆ ತಿಳಿಸಿದರು. ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಬರುತ್ತಿರುವ ಅನುದಾನದಿಂದ ಹಾಗೂ ಆಂತರಿಕ ಸಂಪನ್ಮೂಲಗಳಿಂದಲೇ ಈ ಕೇಂದ್ರವನ್ನು ಇದುವರೆಗೆ ಅಭಿವೃದ್ಧಿಪಡಿಸಿರುವುದಾಗಿ ತಿಳಿಸುತ್ತಾ ಇಲ್ಲಿಯವರೆಗೆ ಸುಮಾರು ರೂ.40.00 ಕೋಟಿಯಷ್ಟು ವೆಚ್ಚ ಮಾಡಲಾಗಿದೆ ಎಂದು ಸದಸ್ಯರ ಗಮನಕ್ಕೆ ತಂದರು.

   2017–18ನೇ ಸಾಲಿನಿಂದ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿಗೆ ಪ್ರತ್ಯೇಕ ಅನುದಾನವನ್ನು ಪಡೆದುಕೊಳ್ಳಲು ಮಾನ್ಯ ಸಿಂಡಿಕೇಟ್ ಸದಸ್ಯರ ಸಮಿತಿಯೊಂದು ಪ್ರಸ್ತಾವನೆಯೊಂದಿಗೆ ಮಾನ್ಯ ಕರ್ನಾಟಕ ರಾಜ್ಯ ಮುಖ್ಯ ಮಂತ್ರಿಯವರನ್ನು ಮತ್ತು ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಭೇಟಿಮಾಡಿ 2017–18ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಸೇರಿಸಿಕೊಳ್ಳುವ ಹಾಗೆ ಕ್ರಮಕೈಗೊಳ್ಳಬೇಕೆಂದು ಸಭೆಯಲ್ಲಿ ನಿರ್ಣಯಿಸಲಾಯಿತು.

2. ಮಾನ್ಯ ಕುಲಪತಿಯವರು ಸದ್ರಿ ಸಭೆಯನ್ನು ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಿದ ಬಗ್ಗೆ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರದ ಪ್ರಭಾರ ನಿರ್ದೇಶಕರನ್ನು ಮತ್ತು ಅಲ್ಲಿನ ಸಿಬ್ಬಂದಿ ವರ್ಗದವರನ್ನು ಪ್ರಶಂಸಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

Iನಡಾವಳಿಗಳ ದೃಢೀಕರಣ

1. ದಿನಾಂಕ 22.10.2016ರಂದು ನಡೆದ 2016ನೇ ಸಾಲಿನ ಏಳನೆಯ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

2. ದಿನಾಂಕ 02.12.2016ರಂದು ನಡೆದ 2016ನೇ ಸಾಲಿನ ತೃತೀಯ ವಿಶೇಷ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

II ಅನುಸರಣಾ ವರದಿಯ ಅನುಮೋದನೆ

1. ದಿನಾಂಕ 21.06.2016ರಂದು ನಡೆದ 2016ನೇ ಸಾಲಿನ ನಾಲ್ಕನೆಯ ಸಾಮಾನ್ಯ ಸಭೆಯ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

2. ದಿನಾಂಕ 31.08.2016ರಂದು ನಡೆದ 2016ನೇ ಸಾಲಿನ ಆರನೆಯ ಸಾಮಾನ್ಯ ಸಭೆಯ ಅನುಸರಣಾ ವರದಿಯನ್ನುಈ ಕೆಳಗಿನಂತೆ ತಿದ್ದುಪಡಿಮಾಡಿ ಅನುಮೋದಿಸಲಾಯಿತು:

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ:6:4 (2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಂಥಪಾಲಕ, ಉಪಗ್ರಂಥಪಾಲಕ ಮತ್ತು ಸಹಾಯಕ ಗ್ರಂಥಪಾಲಕ ಪದನಾಮದ ಸಿಬ್ಬಂದಿಗಳ ವಯೋನಿವೃತ್ತಿಯ ವಯಸ್ಸನ್ನು ನಿಗದಿಪಡಿಸುವ ಬಗ್ಗೆ.

**ನಿರ್ಣಯ :** ಸದರಿ ಸಿಬ್ಬಂದಿಗಳ ವಯೋನಿವೃತ್ತಿಯ ವಯಸ್ಸನ್ನು 60–62ಕ್ಕೆ ಏರಿಸಲು ಸರಕಾರವು ನಿರಾಕರಿಸಿದ್ದು, ರಾಜ್ಯ ಉಚ್ಚನ್ಯಾಯಾಲಯದಿಂದ ಪಡೆದ ಮಧ್ಯಂತರ ಆದೇಶದಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಸದರಿ ಸಿಬ್ಬಂದಿಗಳು ಹೆಚ್ಚುವರಿ ಸಲ್ಲಿಸಿದ ಸೇವಾ ಸಮಯದ ವೇತನ ಹಾಗೂ ಇತರೆ ಭತ್ಯೆಗಳನ್ನು ವಿಶ್ವವಿದ್ಯಾನಿಲಯಕ್ಕೆ ಹಿಂದಿರುಗಿಸುವುದಾಗಿ ಮುಚ್ಚಳಿಕೆ ಪತ್ರ ಪಡೆದುಕೊಳ್ಳುವಂತೆ ಕುಲಸಚಿವರಿಗೆ ಸೂಚಿಸಲಾಯಿತು. ಇಲ್ಲವಾದಲ್ಲಿ ಮಧ್ಯಂತರ ಆದೇಶವನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲು ತಿಳಿಸಿದರು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿಸಾ.ಸ:6:5(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ರಾಜ್ಯ ವೇತನ ಶ್ರೇಣಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಗ್ರಂಥಪಾಲಕರಿಗೆ ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸಿರುವ ಬಗ್ಗೆ.

**ನಿರ್ಣಯ :** ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸರಕಾರಕ್ಕೆಸಲ್ಲಿಸಿದ ಪರಿನಿಯಮವು ಅಂಗೀಕೃತವಾಗದೇ ಇದ್ದಲ್ಲಿ ಅಥವಾ ನೀಡಲಾಗುತ್ತಿರುವ ಯುಜಿಸಿ ವೇತನಕ್ಕೆ ಸರ್ಕಾರ ಒಪ್ಪಿಗೆ ನೀಡದಿದ್ದಲ್ಲಿ ಸಿಬ್ಬಂದಿಗಳಿಗೆ ನೀಡಿದ ಹೆಚ್ಚುವರಿ ವೇತನ ಹಾಗೂ ಇತರೆ ಭತ್ಯೆಗಳನ್ನು ವಿಶ್ವವಿದ್ಯಾನಿಲಯಕ್ಕೆ ಹಿಂದಿರುಗಿಸುವುದಾಗಿ ಸಿಬ್ಬಂದಿಗಳಿಂದ ಮುಚ್ಚಳಿಕೆ ಪತ್ರ ಪಡೆದುಕೊಳ್ಳುವಂತೆ ಕುಲಸಚಿವರಿಗೆ ಸೂಚಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾ.ಸ6:22(2016)

**ವಿಷಯ :** ಮೇ/ಜೂನ್ 2016ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ / ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ.

**ನಿರ್ಣಯ :** ತನಿಖಾ ವರದಿಯನ್ನು ಅನುಮೋದಿಸಲಾಯಿತು ಹಾಗೂ ಸಭೆಯು ಹೊಸ ಮಾರ್ಗಸೂಚಿಯನ್ನು ಅಳವಡಿಸಲು ಕ್ರಮಕೈಗೊಳ್ಳುವಂತೆ ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸೂಚಿಸಿತು.

III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ8:1(2016)

**ವಿಷಯ :** ಪದವಿ ಮಟ್ಟದ ಸ್ಪೀಚ್ ಲ್ಯಾಂಗ್ವೇಜ್ ಆ್ಯಂಡ್ ಹಿಯರಿಂಗ್ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ8:2(2016)

**ವಿಷಯ :** ಸ್ನಾತಕೋತ್ತರ ಪರಿಸರ ವಿಜ್ಞಾನ (Environmental Science) ಅಧ್ಯಯನ ಮಂಡಳಿ ರಚನೆ – ಘಟನೋತ್ತರ ಅನುಮೋದನೆಗಾಗಿ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ8:3(2016)

**ವಿಷಯ :** ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ8:4(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಪ್ರೊ.ಖೈಸರ್ ಎಂ.ಖಾನ್, ಪ್ರಾಧ್ಯಾಪಕರು ಇವರನ್ನು ದಿನಾಂಕ 01.11.2016ರಿಂದ 31.12.2016ರ ವರೆಗೆ ಪ್ರಭಾರ ಅಧ್ಯಕ್ಷರಾಗಿ ಹಾಗೂ ದಿನಾಂಕ 01.01.2017ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿಭಾಗದ ಅಧ್ಯಕ್ಷರುಗಳನ್ನಾಗಿ ನಾಮನಿರ್ದೇಶನ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ8:5(2016)

**ವಿಷಯ :** ಡಾ. ಕೆ. ಎಸ್. ಜಯಪ್ಪ, ಪ್ರಾಧ್ಯಾಪಕರು, ಸಾಗರ ಭೂವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ದಿನಾಂಕ 17.10.2016 ರಿಂದ 21.10.2016 ರವರೆಗೆ Survey Department, Colombo, Srilanka ಇಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಕಾರ್ಯಾಗಾರದಲ್ಲಿ ಪತ್ರಿಕೆ ಮಂಡಿಸಲು ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ8:6(2016)

**ವಿಷಯ :** ಡಾ. ವಜೀದಾ ಬಾನೋ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಇವರ ಪರಿವೀಕ್ಷಣಾವಧಿಯನ್ನು ಘೋಷಿಸುವ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪರಿವೀಕ್ಷಣಾವಧಿಯನ್ನು ಘೋಷಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ8:7(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಕರ್ನಾಟಕ ಸರಕಾರದ ಅನುದಾನ/ಪ್ರಸ್ತಾವನೆ ಹಾಗೂ ಇತರ ಕೆಲಸ ಕಾರ್ಯಗಳ ತ್ವರಿತ ವಿಲೇವಾರಿ/ಅನುಸರಣಾ ಕ್ರಮಗಳಿಗಾಗಿ ಬೆಂಗಳೂರಿನಲ್ಲಿ "Liaison Officer" ಒಬ್ಬರನ್ನು ನೇಮಕ ಮಾಡುವ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಸದರಿಯವರನ್ನು ದಿನಾಂಕ 20.11.2016 ರಿಂದ ಅನ್ವಯವಾಗುವಂತೆ ಆರು ತಿಂಗಳ ಅವಧಿಗೆ ಮಾಸಿಕ ರೂ.15,000/- ಗೌರವ ಧನದೊಂದಿಗೆ ನೇಮಕ ಮಾಡುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ8:8(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಯುಜಿಸಿ, ಡಿಎಸ್‌ಟಿ ಮತ್ತು ಕೇಂದ್ರ ಸರ್ಕಾರದ ಅನುದಾನ/ಇತರ ಪ್ರಸ್ತಾವನೆಗಳ ತ್ವರಿತ ವಿಲೇವಾರಿ / ಅನುಸರಣಾ ಕ್ರಮ (Follow up Action) ಗಳಿಗಾಗಿ "Liaison Officer" ಒಬ್ಬರನ್ನು ನೇಮಕ ಮಾಡುವ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಸದರಿಯವರನ್ನು ದಿನಾಂಕ 10.11.2016 ರಿಂದ ಅನ್ವಯವಾಗುವಂತೆ ಆರು ತಿಂಗಳ ಅವಧಿಗೆ ಮಾಸಿಕ ರೂ.20,000/- ಗೌರವ ಧನದೊಂದಿಗೆ ನೇಮಕ ಮಾಡುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ8:9(2016)

**ವಿಷಯ :** ಡಾ. ಕೇಶವಮೂರ್ತಿ ಟಿ., ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು (ಆಯ್ಕೆ ಶ್ರೇಣಿ) ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು (ಪ್ರಸ್ತುತ ನಿಯೋಜನೆ ಮೇರೆಗೆ ದೈಹಿಕ ಶಿಕ್ಷಣ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ) ಇವರಿಗೆ ಯುಜಿಸಿ ಪರಿಷ್ಕೃತ ವೇತನ ಶ್ರೇಣಿ 01.01.2006ಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶದ ಪ್ರಕಾರ ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕ (ಆಯ್ಕೆ ವೇತನ ಶ್ರೇಣಿ) ಹುದ್ದೆಯಿಂದ ದೈಹಿಕ ಶಿಕ್ಷಣ ಉಪನಿರ್ದೇಶಕ (Deputy Director of Physical Education) ರಾಗಿ ಪದನಾಮೀಕರಣ ಮಾಡುವ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಇದರ ಬಗ್ಗೆ ಯುಜಿಸಿ ಪತ್ರ ಸಂ: D.O.F No.3-2/2009 (PS) dated 04.08.2015 and proceedings of Government of Karnataka order No.ED 230 UNE 2006, Bangalore dated 04.07.2008 ಇದಕ್ಕೆ ಸಂಬಂಧಪಟ್ಟ ಎಲ್ಲಾ ಸೂಕ್ತ ದಾಖಲೆಗಳೊಂದಿಗೆ ಮರು ಮಂಡಿಸಲು ಕುಲಸಚಿವರಿಗೆ ಸುಚಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ8:10(2016)

**ವಿಷಯ :** ಡಾ. ಕೆ.ಬಿ.ವಿಜಯಕುಮಾರ್, ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ದಿನಾಂಕ 21.10.2016ರಿಂದ 24.10.2016ರ ವರೆಗೆ Addis Ababa University, Ethiopiaಇಲ್ಲಿ ಉಪನ್ಯಾಸ ನೀಡಲು ಹಾಗೂ ಪಿಹೆಚ್. ಡಿ. ಮೌಲ್ಯಮಾಪನಕ್ಕೆ ಸಂಬಂಧಿಸಿದ ಕೆಲಸ ಕಾರ್ಯಗಳ ಬಗ್ಗೆ ಭೇಟಿ ನೀಡಿದ ಬಗ್ಗೆ ಘಟನೋತ್ತರ ಅನುಮೋದನೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ8:11(2016)

**ವಿಷಯ :** ಡಾ. ಎನ್. ಕರುಣಾಕರ, ಪ್ರಾಧ್ಯಾಪಕರು, USIC, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ದಿನಾಂಕ 06.11.2016ರಿಂದ 09.11.2016ರವರೆಗೆ Spain ಇಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿರುವ ಬಗ್ಗೆ ಘಟನೋತ್ತರ ಅನುಮೋದನೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ8:12(2016)

**ವಿಷಯ :** ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ NME-ICT ಯೋಜನೆಯಡಿ ಭಾರತ ಸಂಚಾರ ನಿಗಮ ಲಿ., (BSNL) ನಿಂದ ಪಡೆದ 1 Gpbs Internet Connectivity ಯ ಶುಲ್ಕ ಪಾವತಿ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ8:13(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Centre for Application of Radioisotopes & Radiation Technology (CARRT) ಸ್ಥಾಪನೆ ಪ್ರಸ್ತಾವನೆಯ ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ8:14(2016)

**ವಿಷಯ :** Construction of Compound Wall to Vishwamangala School at Mangalore University, Mangalagangothri–ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ದಿನಾಂಕ 28.11.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ8:15(2016)

**ವಿಷಯ :** Proposed Construction of the Building in CARRT Block in the Campus of Mangalore University, Mangalagangothri- ಅಂದಾಜುಪಟ್ಟಿ ಅನುಮೋದನೆ ಬಗ್ಗೆ.

ಅಂದಾಜುಪಟ್ಟಿ ಮೊತ್ತ ರೂ. 79.35 ಲಕ್ಷ

**ಸಭೆಯ ದಿನಾಂಕ: 20.12.2016**

**ನಿರ್ಣಯ:** ದಿನಾಂಕ 28.11.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ8:16(2016)

**ವಿಷಯ :** Estimate for Providing additional alteration to existing ground floor and first floor building of Kannada (South side) for accommodating CRERS Project at Mangalore University Campus – Revised estimate (Civil & Electrical).

**ಸಭೆಯ ದಿನಾಂಕ: 20.12.2016**

**ನಿರ್ಣಯ:** ದಿನಾಂಕ 28.11.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ8:17(2016)

**ವಿಷಯ :** Supplying and fixing of Modular Lab at Mangalore University Campus and Constituent Post Graduate Centre at University College, Mangalore and P.G. Centre Chikka-Aluvara at Kushalnagar– ಕಾಲಾವಧಿ ವಿಸ್ತರಣೆ

**ಸಭೆಯ ದಿನಾಂಕ: 20.12.2016**

**ನಿರ್ಣಯ:** ದಿನಾಂಕ 28.11.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ ಸಾ.ಸ8:18(2016)

ವಿಷಯ : Prevention of water leakage in Boys Hostel Dining Block at Mangalore University Campus, Mangalagangothri - Excess Quantityಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 20.12.2016**

ನಿರ್ಣಯ: ದಿನಾಂಕ 28.11.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ ಸಾ.ಸ8:19(2016)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ "ಸಿ" ಮಾದರಿ ವಸತಿಗೃಹ Block No - 4 ಮತ್ತು 5ಕ್ಕೆ Galvalume sheet ಅಳವಡಿಸುವ ಕಾಮಗಾರಿ – ಅಂದಾಜುಪಟ್ಟಿ ಅನುಮೋದನೆ ಬಗ್ಗೆ.

ಅಂದಾಜುಪಟ್ಟಿ ಮೊತ್ತ ರೂ. 15,75,130.00

**ಸಭೆಯ ದಿನಾಂಕ: 20.12.2016**

ನಿರ್ಣಯ: ದಿನಾಂಕ 28.11.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ ಸಾ.ಸ8:20(2016)

ವಿಷಯ : Construction of Staircase room to the Electronics Department Class Rooms and Laboratories building at Mangalore University, Campus, Mangalagangothri- ಕಾಲಾವಧಿ ವಿಸ್ತರಣೆ

**ಸಭೆಯ ದಿನಾಂಕ: 20.12.2016**

ನಿರ್ಣಯ: ದಿನಾಂಕ 28.11.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ ಸಾ.ಸ8:21(2016)

ವಿಷಯ : Proposed construction of Second Floor Building over the existing First Floor Girls Hostel Building Mangalore University Campus, Mangalagangothri– ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 20.12.2016**

ನಿರ್ಣಯ: ದಿನಾಂಕ 28.11.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ ಸಾ.ಸ8:22(2016)

ವಿಷಯ : Extension of Management block and construction of Class room first floor at University College, Mangalore–ಟೆಂಡರುಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 20.12.2016**

ನಿರ್ಣಯ: ದಿನಾಂಕ 28.11.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ ಸಾ.ಸ8:23(2016)

ವಿಷಯ : Construction of Women's Hostel to the University College at Ashok Nagar, Mangalore – ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 20.12.2016**

ನಿರ್ಣಯ: ದಿನಾಂಕ 28.11.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾ.ಸ8:24(2016)

**ವಿಷಯ :** ದಿನಾಂಕ 09.11.2016ರಂದು ನಡೆದ ಕ್ರೀಡಾ ಸಲಹಾ ಸಮಿತಿಯ ನಡವಳಿಯ ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ದಿನಾಂಕ 09.11.2016ರಂದು ನಡೆದ ಕ್ರೀಡಾ ಸಲಹಾ ಸಮಿತಿಯ ನಡಾವಳಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾ.ಸ8:25(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ 2015–16ನೇ ಸಾಲಿನ ವಾರ್ಷಿಕ ವರದಿಯ ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾ.ಸ8:26(2016)

**ವಿಷಯ :** ಪರೀಕ್ಷಾ ಮೌಲ್ಯಮಾಪನ ಕೇಂದ್ರದ ಭತ್ಯೆಯನ್ನು ಪರಿಷ್ಕರಿಸುವ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಅನುಮೋದಿಸಲಾಯಿತು. ಪರಿಷ್ಕೃತ ಭತ್ಯೆಯು ಈ ಕೆಳಗಿನಂತಿದೆ.

| ಮೌಲ್ಯಮಾಪಕರ ಸಂಖ್ಯೆ | ಕೇಂದ್ರ ಭತ್ಯೆ ರೂ. (ದಿನ ಒಂದಕ್ಕೆ) |
|---|---|
| 100ರ ತನಕ | 600.00 |
| 101–250 | 800.00 |
| 251–500 | 1,000.00 |
| 501–ಮತ್ತು ಮೇಲ್ಪಟ್ಟು | 1,500.00 |

**ಕಾರ್ಯಸೂಚಿ ಸಂಖ್ಯೆ:** ಡಿಇವಿಸಾ.ಸ8:27(2016)

**ವಿಷಯ :** BRNS – CRP, CARER – Alpha Guard (Radon Calibration Monitor) ಉಪಕರಣ ಖರೀದಿಗೆ ಸಂಬಂಧಿಸಿದ ಪ್ರಸ್ತಾವನೆ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ದಿನಾಂಕ 08.12.2016 ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ8:28(2016)

**ವಿಷಯ :** 2015–16ನೇ ಸಾಲಿಗೆ ಗಣಕಯಂತ್ರಗಳ ವಾರ್ಷಿಕ ನಿರ್ವಹಣೆಗೆ ನೀಡಿದ ಗುತ್ತಿಗೆ ಅವಧಿಯನ್ನು 2016–17ನೇ ಸಾಲಿಗೆ ವಿಸ್ತರಿಸಿದ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ8:29(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಮೂರು ಹೊಸ ವಾಹನಗಳ ಖರೀದಿ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ8:30(2016)

**ವಿಷಯ :** 'Santha Annamma Degree College, Virajpet 571 218'ಎಂಬ ಕಾಲೇಜಿನ ಹೆಸರನ್ನು 'St. Anne's Degree College, Virajpet -571218ಎಂಬುದಾಗಿ ಬದಲಾಯಿಸುವ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ8:31(2016)

**ವಿಷಯ :** ಶೈಕ್ಷಣಿಕ ವರ್ಷ 2017–18ನೇ ಸಾಲಿಗೆ ಹೊಸ/ವಿಸ್ತರಣಾ/ಮುಂದುವರಿಕೆ/ಶಾಶ್ವತ ಸಂಯೋಜನೆ ಮಂಜೂರು ಮಾಡುವ ಬಗ್ಗೆ ಕಾಲೇಜುಗಳ / ವಿದ್ಯಾಸಂಸ್ಥೆಗಳ ಪರಿಶೀಲನೆಗೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ವಿಶ್ವವಿದ್ಯಾನಿಲಯದ ಕಾಯ್ದೆ ಹಾಗೂ ನಿಯಮಗಳ ಪ್ರಕಾರ ಶೈಕ್ಷಣಿಕ ವರ್ಷ 2017–18ನೇ ಸಾಲಿನ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲು ನಿರ್ಣಯಿಸಿ ಅನುಮೋದಿಸಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ8:32(2016)

**ವಿಷಯ :** ಎ. ಜೆ. ಇನ್ಸ್ಟಿಟ್ಯೂಟ್ ಆಫ್ ಮೇನೇಜ್‌ಮೆಂಟ್ ಎಂಬ ವಿದ್ಯಾ ಸಂಸ್ಥೆಗೆ 'ಪಿಹೆಚ್.ಡಿ. ಇನ್ ಮೇನೇಜ್‌ಮೆಂಟ್' ಕೋರ್ಸಿಗೆ ಸಂಯೋಜನೆ ನೀಡುವ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಎ.ಜೆ.ಇನ್ಸ್ಟಿಟ್ಯೂಟ್ ಆಫ್ ಮೇನೇಜ್‌ಮೆಂಟ್ ಎಂಬ ವಿದ್ಯಾ ಸಂಸ್ಥೆಗೆ"Ph.D in Management " ಕೋರ್ಸಿಗೆ ಸಂಯೋಜನೆ ನೀಡುವ ಬಗ್ಗೆ ವಿಷಯ ಪರಿಣಿತರ ಸಮಿತಿಯನ್ನು ಕಳುಹಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ8:33(2016)

**ವಿಷಯ :** ಡಾ. ರಾಜು ಕೃಷ್ಣ ಚಲನ್ನವರ್, ಸಹ ಪ್ರಾಧ್ಯಾಪಕರು, ಅನ್ವಯಿಕ ಸಸ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ದಿನಾಂಕ 22.11.2016 ರಿಂದ 13.12.2016ರವರೆಗೆ Implementation of Indo-Argentinean Joint research Project ಗೆ ಸಂಬಂಧಿಸಿ ಅರ್ಜೆಂಟೀನಾಗೆ ಭೇಟಿ ನೀಡಲು ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ8:34(2016)

**ವಿಷಯ :** ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿ ನಡೆದಿರುವ ವಿದ್ಯಾಮಾನಗಳ ಪರಿಶೀಲನೆಗೆ ನಿಯೋಜಿಸಿರುವ ಸಮಿತಿಯ ವರದಿಯ ಮೇಲೆ ನೀಡಿದ ಕಾರಣ ಕೇಳಿ ನೋಟೀಸಿಗೆ ಪ್ರಾಂಶುಪಾಲರು ನೀಡಿದ ವಿವರಣೆ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪ್ರಾಂಶುಪಾಲರು, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇವರಿಗೆ ವಿಶ್ವವಿದ್ಯಾನಿಲಯವು ನೀಡಿದ ಕಾರಣ ಕೇಳಿ ನೋಟೀಸಿಗೆ ಪ್ರತಿಯಾಗಿ ನೀಡಿದ ಸಮಜಾಯಿಷಿಕೆಯ ವರದಿಯನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿ, ಅವರ ಸಮಜಾಯಿಷಿಕೆಯು ತೃಪ್ತಿಕರವಾಗಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿತು. ಅಲ್ಲದೆ ತಮ್ಮ ಸಮಜಾಯಿಷಿಕೆಯಲ್ಲಿ

ವಿಶ್ವವಿದ್ಯಾನಿಲಯ ಹಾಗೂ ಪರಿಶೀಲನಾ ಸಮಿತಿಯ ಕುರಿತು ಅವರು ಮಾಡಿದ ಆರೋಪಗಳನ್ನು ಗಂಭೀರವಾಗಿ ಪರಿಗಣಿಸಿತು. ಸಮಿತಿ ವರದಿ ಹಾಗೂ ಸಮಜಾಯಿಷಿಕೆಯಲ್ಲಿ ನಮೂದಿಸಲಾದ ಅಂಶಗಳ ಕುರಿತು ಸತ್ಯಾಸತ್ಯತೆಯನ್ನು ಪರಿಶೀಲಿಸಲು ನಿರ್ಣಯಿಸಲಾಯಿತು. ಹಾಗೂ ಈ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಓರ್ವ ನಿವೃತ್ತ ನ್ಯಾಯಾಧೀಶರನ್ನು ತನಿಖಾಧಿಕಾರಿಯನ್ನಾಗಿ ಮತ್ತು ಸೂಕ್ತ ಮಂಡನಾಧಿಕಾರಿಯನ್ನು ನೇಮಿಸಲು ಕುಲಪತಿ ಯವರಿಗೆ ಅಧಿಕಾರ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ8:35(2016)

**ವಿಷಯ :** ವಿಶ್ವವಿದ್ಯಾನಿಲಯ ಆವರಣ, ಮಂಗಳಗಂಗೋತ್ರಿ ಇಲ್ಲಿ ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ ಹಾಗೂ ಹುದ್ದೆಗಳ ಸೃಜನೆಯ ಅನುಶಾಸನದ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪರಿಷ್ಕೃತ ಕರಡು ಪರಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ8:36(2016)

**ವಿಷಯ :** ವಿವಿಧ ಬೋಧಕ /ಇತರ ಶೈಕ್ಷಣಿಕ ಹುದ್ದೆಗಳ ನೇಮಕಾತಿ / ಪದೋನ್ನತಿಗೆ ಸಂಬಂಧಿಸಿದ ಪರಿಷ್ಕೃತ ಆಯ್ಕೆ ಸಮಿತಿ ರಚನೆ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪರಿಷ್ಕೃತ ಪರಿಣಿತರ ಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ8:37(2016)

**ವಿಷಯ :** ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಡಾ. ಜೆ. ಶಾಮಸುಂದರ್ ಇವರ ಮೇಲಿನ ದೂರು ಮತ್ತು ಅಶಿಸ್ತಿನ ವರ್ತನೆಯ ಕುರಿತು ಕ್ರಮಕೈಗೊಳ್ಳುವ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಡಾ.ಕೃಷ್ಣ ಶರ್ಮ ಮತ್ತು ಡಾ.ಜೆ.ಶಾಮ ಸುಂದರ್‌ರವರ ಮೇಲೆ ಮಂಗಳೂರು ವಿಶ್ವವಿದ್ಯಾನಿಲಯ ಸಿ.ಸಿ.ಎ. ಪರಿನಿಯಮದ ಪಾರಾ 10ರ ಅನುಸಾರ ಜಂಟಿ ಇಲಾಖಾ ವಿಚಾರಣೆ ನಡೆಸಲು ನಿರ್ಣಯಿಸಲಾಯಿತು ಹಾಗೂ ಇಲಾಖಾ ವಿಚಾರಣೆಯನ್ನು ನಡೆಸಲು ಓರ್ವ ನಿವೃತ್ತ ನ್ಯಾಯಾಧೀಶರನ್ನು ತನಿಖಾಧಿಕಾರಿಯನ್ನಾಗಿ ಮತ್ತು ಸೂಕ್ತ ಮಂಡನಾಧಿಕಾರಿಯನ್ನು ನೇಮಿಸಲು ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ8:38(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಹಿಂದಿ ಪದವಿ ಪರೀಕ್ಷೆ (M.A. Hindi) ಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ನೀಡಲು "Shri Narayan Rao Malkhed Gold Medal in Hindi" ದತ್ತಿ ನಿಧಿ ಸ್ಥಾಪಿಸುವ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ8:39(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ವ್ಯವಹಾರ ಆಡಳಿತ ಸ್ನಾತಕೋತ್ತರ ಪದವಿ (M.B.A.) ಪರೀಕ್ಷೆ ಹಾಗೂ ಬಿ. ಕಾಂ. ಪದವಿ ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿ/ನಿಗೆ ನೀಡಲು "ಡಾ. ಎಚ್. ವಿ. ಶಂಕರನಾರಾಯಣ ಚಿನ್ನದ ಪದಕ" ದತ್ತಿ ನಿಧಿಗಳನ್ನು ಸ್ಥಾಪಿಸುವ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾ.ಸ8:40(2016)

**ವಿಷಯ :** ಪಿಹೆಚ್.ಡಿ. ಪ್ರಬಂಧವನ್ನು ಅವಧಿ ಪೂರ್ವ ಸಲ್ಲಿಸಲು ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಸಭೆಯ ಮುಂದೆ ಮಂಡಿಸಿರುವುದಿಲ್ಲ.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್‌ಸಾ.ಸ8:41(2016)

**ವಿಷಯ :** ಡಾ.ಪುಷ್ಪ ಕುಟ್ಟಣ್ಣ, ಸಿಂಡಿಕೇಟು ಸದಸ್ಯರು ಇವರ ಪ್ರಸ್ತಾವನೆಗಳು.

1. ಮಂಗಳೂರು ವಿಶ್ವವಿದ್ಯಾನಿಲಯದ ಪರಿಮಿತಿಗೊಳಪಟ್ಟಿರುವ ಹಲವು ಕಾಲೇಜುಗಳಲ್ಲಿ 'ಜರ್ನಲಿಸಂ'(ಪತ್ರಿಕೋದ್ಯಮ) ಎಂಬ ಅಧ್ಯಯನ ವಿಷಯವನ್ನು ವಿದ್ಯಾರ್ಥಿಗಳಿಗೆ ಬೋಧಿಸಲಾಗುತ್ತಿದೆ. ಆದರೆ ಈ ವಿಷಯವನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಾಯೋಗಿಕ ಜ್ಞಾನವನ್ನು ಗಳಿಸಿಕೊಳ್ಳಲು ಪ್ರಯೋಗಾಲಯದ ವ್ಯವಸ್ಥೆ ಪ್ರತಿಯೊಂದು ಕಾಲೇಜಿನಲ್ಲಿ ಅತೀ ಅವಶ್ಯಕ. ಆದರೆ ಕೆಲವು ಕಾಲೇಜುಗಳು ವಿದ್ಯಾರ್ಥಿಗಳಿಗೆ ಪ್ರಯೋಗಾಲಯದ ವ್ಯವಸ್ಥೆಯನ್ನು ಕಲ್ಪಿಸದೇ ಇರುವುದು ಗಮನಕ್ಕೆ ಬಂದಿರುತ್ತದೆ. ಆದರೆ ಇದಕ್ಕೆ ಸಂಬಂಧಿಸಿದಂತೆ ಪ್ರಯೋಗಾಲಯದ ಶುಲ್ಕವನ್ನು ವಿದ್ಯಾರ್ಥಿಗಳಿಂದ ವಸೂಲಿ ಮಾಡಲಾಗುತ್ತಿದೆ.

   ಈ ಹಿನ್ನಲೆಯಲ್ಲಿಪ್ರತೀ ಕಾಲೇಜಿನಲ್ಲಿಯೂ ಪ್ರಯೋಗಾಲಯದ ವ್ಯವಸ್ಥೆ ಕಡ್ಡಾಯವಾಗಿ ವಿದ್ಯಾರ್ಥಿಗಳಿಗೆ ಕಲ್ಪಿಸಿಕೊಡುವಂತೆ, ಜರ್ನಲಿಸಂನ್ನು ಬೋಧಿಸುವ ಕಾಲೇಜುಗಳಿಗೆ ಆದೇಶಿಸಬೇಕು.
2. ಮಂಗಳೂರು ವಿಶ್ವವಿದ್ಯಾನಿಲಯದ ಪ್ರತಿಯೊಂದು ಕಾಲೇಜಿನಲ್ಲಿಯೂ ವಿಕಲಚೇತನ ವಿದ್ಯಾರ್ಥಿಗಳಿಗೆ, ಸಿಬ್ಬಂದಿ ವರ್ಗದವರಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಂತೆ ಈ ಮೂಲಕ ವಿನಂತಿಸಲಾಗಿದೆ. ವಿಕಲಚೇತನ ವಿದ್ಯಾರ್ಥಿಗಳಿಗೆ/ಸಿಬ್ಬಂದಿ ವರ್ಗದವರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ, ಲಿಫ್ಟ್ ವ್ಯವಸ್ಥೆಗಳಿಲ್ಲದಿದ್ದಲ್ಲಿ ರ್‍ಯಾಂಪ್‌ನ ವ್ಯವಸ್ಥೆಯನ್ನು ಕಡ್ಡಾಯವಾಗಿ ಕಲ್ಪಿಸುವುದು ಹಾಗೂ ಭೋದನಾ ಮತ್ತು ಅವರ ಕಲಿಕೆಯ ಕ್ರಮದಲ್ಲಿ ಹೆಚ್ಚಿನ ಆಸಕ್ತಿವಹಿಸುವಂತೆ ಕ್ರಮಕೈಗೊಳ್ಳಲು ಈ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿದೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪ್ರಸ್ತಾವನೆ ಕ್ರ.ಸಂ.1 ಹಾಗೂ 2ಕ್ಕೆ ಸಂಬಂಧಿಸಿದಂತೆ, ಸಂಯೋಜನೆ ಕೋರಿಕೆ ಅರ್ಜಿಯಲ್ಲಿ ಈ ಅಂಶಗಳನ್ನು ಸೇರಿಸಲು ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ8:42(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ದತ್ತಾಂಶ ಕೇಂದ್ರ ಸ್ಥಾಪಿಸುವ ಬಗ್ಗೆ.

**ಸಭೆಯ ದಿನಾಂಕ: 20.12.2016**

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನುಮುಕ್ತಾಯಗೊಳಿಸಿದರು.

ಸಹಿ/– ಸಹಿ/–

ಕುಲಸಚಿವರು ಕುಲಪತಿಗಳು